# ಕನ್ನಡ ಜೈನಕಾವ್ಯಗಳ ಪರಂಪರೆ

**ಕರುಣಾ ಜಮದರಖಾನಿ**

ಅತಿಥಿ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ.

**Received: 18-04-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672677**

**ABSTRACT:**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೇ ಶತಮಾನದಿಂದ ಸುಮಾರು ಹನ್ನೆರಡನೇ ಶತಮಾನದ ವರೆಗಿನ ಕಾಲಘಟ್ಟವನ್ನು ಹಳೆಗನ್ನಡ ಎಂದು ಗುರುತಿಸಬಹುದು. ಈ ಕಾಲದ ಸಾಹಿತ್ಯ ಮುಖ್ಯವಾಗಿ ಜೈನ ಧರ್ಮವನ್ನು ಅವಲಂಬಿಸಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಈ ಘಟ್ಟಕ್ಕೆ ಆದಿ-ಕಾವ್ಯ ಎಂದೂ ಸಹ ಕರೆಯಬಹುದು. ಈ ಕಾಲದ ಅತಿ ಪ್ರಸಿದ್ಧ ಕವಿಯೆಂದರೆ ಆದಿಕವಿಪಂಪ.

ಪಂಪನ 'ವಿಕ್ರಮಾರ್ಜುನ ವಿಜಯ' ಅಥವಾ 'ಪಂಪ ಭಾರತ' ಇಂದಿಗೂ ಮೇರು ಕೃತಿಯೆಂದು ಪರಿಗಣಿತವಾಗಿದೆ. ಪಂಪ ಭಾರತ ಮತ್ತು ತನ್ನ ಇನ್ನೊಂದು ಮುಖ್ಯಕೃತಿಯಾದ ಆದಿಪುರಾಣದ ಮೂಲಕ ಪಂಪ ಕನ್ನಡ ಕಾವ್ಯಪರಂಪರೆಯ ದಿಗ್ಗಜರಲ್ಲಿ ಒಬ್ಬನಾಗಿದ್ದಾನೆ. ಪಂಪ ಭಾರತ ಸಂಸ್ಕೃತ ಮಹಾಭಾರತದ ಕನ್ನಡ ರೂಪಾಂತರ. ತನ್ನ ಮಾನವತಾವಾದ ಹಾಗೂ ಗಂಭೀರ ಲೇಖನ ಶೈಲಿಯ ಮೂಲಕ ಕನ್ನಡದ ಅತ್ಯಂತ ಪ್ರಭಾವಶಾಲಿ ಲೇಖಕರಲ್ಲಿ ಒಬ್ಬನಾಗಿದ್ದಾನೆ. 'ಮಾನವ ಕುಲ ತಾನೊಂದೇ ವಲಂ' ಎಂದು ವಿಶ್ವಮಾನವ ತತ್ವವನ್ನು ಸಾರಿದ ಜಗದ ಕವಿ ಪಂಪ.

ಇದೇ ಕಾಲದ ಇನ್ನೊಬ್ಬ ಪ್ರಮುಖ ಲೇಖಕನೆಂದರೆ ಶಾಂತಿನಾಥ ಪುರಾಣವನ್ನು ರಚಿಸಿದ ಪೊನ್ನ (939-966). ಈ ಕಾಲದ ಮತ್ತೊಬ್ಬ ಹೆಸರಾಂತ ಕವಿ ರನ್ನ (949-?). ರನ್ನನ ಪ್ರಮುಖ ಕೃತಿಗಳು ಜೈನ ಧರ್ಮೀಯವಾದ ಅಜಿತ ತೀರ್ಥಂಕರ ಪುರಾಣ ಮತ್ತು ಗದಾಯುದ್ಧಂ ಅಥವಾ ಸಾಹಸಭೀಮ ವಿಜಯ.

**KEYWORDS:**

ಪಂಪ, ವಿಕ್ರಮಾರ್ಜುನ ವಿಜಯ, ಪೊನ್ನ, ಶಾಂತಿಪುರಾಣ, ರನ್ನ, ಸಾಹಸಭೀಮ ವಿಜಯ, ಅಜಿತ ತೀರ್ಥಂಕರ ಪುರಾಣ, ಚಾವುಂಡರಾಯ, ಚಾವುಂಡರಾಯ ಪುರಾಣ.

ವಿಶ್ವದ ಸಕಲ ಜೀವರಾಶಿಗೆ ಹಿತವನ್ನು ಬಯಸಿ, ನಿತ್ಯ ಸುಖದ ಮಾರ್ಗೋಪಾಯವನ್ನು ಬೋಧಿಸುವ ಜೈನಧರ್ಮವು ಅಹಿಂಸೆಯ ಭದ್ರವಾದ ಬುನಾದಿಯ ಮೇಲೆ ರೂಪಿತವಾಗಿ ಅನಾದಿಯಿಂದಲೂ ಬೆಳಗುತ್ತ ಬಂದಿದೆ. (ಜೈನ) ಜಿನರಿಂದ ನಿರೂಪಿಸಲ್ಪಟ್ಟ ಈ ಧರ್ಮವು ಒಂದು ಕಾಲಕ್ಕೆ ಜನಸಾಮಾನ್ಯರ ಧರ್ಮವಾಗಿ ಉನ್ನತ ಸ್ಥಿತಿಯಲ್ಲಿದ್ದು, ಘನವೆತ್ತ ಧರ್ಮವಾಗಿತ್ತು. ಕನ್ನಡ ನಾಡು ಜೈನ ಸಂಸ್ಕೃತಿಯ ಧರ್ಮದ ಬೀಡಾಯಿತು. ಕನ್ನಡ ನುಡಿ ಜೈನ ವಾಂಗ್ಮಯದ ತವರೂರಾಯಿತು. ಕರ್ನಾಟಕದ ಅನೇಕ ರಾಜರು, ರಾಜ ಮನೆತನಗಳು, ಸಾಮಂತರಾಜರು, ಕೋಶಾಧಿಕಾರಿಗಳು, ಮಹಾಮಂತ್ರಿಗಳು, ದಂಡನಾಯಕರು "ಜೈನ ಧರ್ಮವು ಸಾರುವ ಉದಾತ್ತ ತತ್ವ,

ಧ್ಯೆಯಗಳನ್ನು ಪಾಲಿಸಿದರೆ ಪತಿತ ಪಾವನನಾಗಬಲ್ಲ ಜೀವ ಜೀವನುಕ್ತನಾಗಬಲ್ಲ, ನರನು ನಾರಾಯಣನಾಗಬಲ್ಲ, ಬುದ್ದನು ಸಿದ್ಧನಾಗಬಲ್ಲ" ಎಂಬ ವಿಚಾರಗಳಿಗೆ ಮಾರುಹೋಗಿ ತಲೆಬಾಗಿ ಜೈನಧರ್ಮವನ್ನು ಶಿರೋಧಾರಣ ಮಾಡಿ ಅನುಸರಿಸಲಾರಂಭಿಸಿದರು.

ಕನ್ನಡ ಜೈನಕಾವ್ಯಗಳನ್ನು ಒಂದು ರೀತಿಯಲ್ಲಿ ವಿಶ್ವಕೋಶಗಳೆಂದು ಕರೆಯಬಹುದು. ಸಾಹಿತ್ಯ, ಇತಿಹಾಸ, ಧರ್ಮ, ಸಮಾಜ, ಸಂಸ್ಕೃತಿ ಕೂಡಿರುವುದರಿಂದ ವಿಶ್ವಕೋಶಗಳ ಸ್ವರೂಪವನ್ನು ಹೊಂದಿವೆಯೆಂದು ಹೇಳಬಹುದು.

ಜೈನ ಕವಿಗಳ ಕಾವ್ಯರಚನೆಯ ಮುಖ್ಯ ಉದ್ದೇಶವೆಂದರೆ; ಧರ್ಮ ಪ್ರತಿಪಾದನೆ ಅಥವಾ ಧರ್ಮ ಪ್ರಸಾರ, ಆದರೆ ಈ ಕವಿಗಳು ಸಮಕಾಲೀನ ಕಾಲಘಟ್ಟದ ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡ ಕಾವ್ಯಗಳನ್ನು ರಚಿಸಿದ್ದಾರೆ. ಕ್ರಿ.ಶ. 640 ರ ಸಮಯದಲ್ಲಿ ರಚಿತವಾಗಿರುವ 'ಕರ್ಣಾಟೇಶ್ವರ ಕಥಾ' ಎಂಬ ಕಾವ್ಯವು ಬಾದಾಮಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯನ್ನು ಕುರಿತ ಐತಿಹಾಸಿಕ ಅಂಶಗಳಿಂದ ಕೂಡಿದೆ. ಇಮ್ಮಡಿ ಪುಲಿಕೇಶಿಯ ಸೇನಾಧಿಪತಿ ಮತ್ತು ಕನ್ನಡ ಸಂಸ್ಕೃತ ಎರಡೂ ಭಾಷೆಗಳಲ್ಲಿ ಪ್ರಕಾಂಡಪಂಡಿತನಾಗಿದ್ದ ರವಿಕೀರ್ತಿಯು ಈ ಕಾವ್ಯದ ಕರ್ತೃವೆಂದು ವಿದ್ವಾಂಸರು ಊಹಿಸಿದ್ದಾರೆ. ಬಾದಾಮಿ ಚಾಲುಕ್ಯರು ಮತ್ತು ಸಮಕಾಲೀನ ಪಲ್ಲವರ ಚರಿತ್ರೆಯ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಹೊಂದಿರಬಹುದಾದ ಈ ಕಾವ್ಯವು ದುರದೃಷ್ಟವಶಾತ್ ಉಪಲಬ್ದವಾಗಿಲ್ಲ.

ಈಗ ಉಪಲಬ್ಧವಾಗಿರುವ ಕನ್ನಡದ ಅತ್ಯಂತ ಪ್ರಾಚೀನವಾದ ಕನ್ನಡದ ಜೈನ ಕಾವ್ಯವೆಂದರೆ ವಡ್ಡಾರಾಧನೆ. 'ಆರಾಧನ ಕರ್ಣಾಟ ಟೀಕಾ' ಎಂದು ಈ ಕಾವ್ಯದ ನಿಜವಾದ ಹೆಸರು. 'ಭ್ರಾಜಿಷ್ಣು ' ಎಂಬುವನು ಈ ಕಾವ್ಯದ ಕರ್ತೃ ಎಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಗದ್ಯ ಕಾವ್ಯದಲ್ಲಿನ ಭದ್ರಬಾಹು ಭಟ್ಟಾರರ ಕಥೆ, ಚಾಣುಕ್ಯ ರಿಸಿಯ ಕಥೆ ಈ ಎರಡು ಕಥೆಗಳಲ್ಲಿ ಕರ್ನಾಟಕದ ರಾಜಕಿಯ ಹಾಗೂ ಧಾರ್ಮಕ್ಕೆ ಸಂಬಂಧಿಸಿದ ಇತಿಹಾಸವಿದೆ. ಚಾಣುಕ್ಯ ರಿಸಿಯ ಕಥೆಯಲ್ಲಿ ಚಂದ್ರಗುಪ್ತಮೌರ್ಯನು ನವನಂದರನ್ನು ಸೋಲಿಸಿ ಮೌರ್ಯವಂಶದ ಸಾಮ್ರಾಜ್ಯವನ್ನು ಸ್ಥಾಪಿಸಿದ ಭಾರತದ ರಾಜಕೀಯ ಚರಿತ್ರೆಗೆ ಸಂಬಂಧಿಸಿದ ಮಹತ್ವದ ಸಂಗತಿಯು ದಾಖಲಾಗಿದೆ. ಭದ್ರಬಾಹು ಭಟ್ಟಾರಕರ ಕಥೆಯಲ್ಲಿ ಕ್ರಿ.ಪೂ. 3ನೇ ಶತಮಾನದಲ್ಲಿ ಅಂತಿಮ ಶ್ರುತ ಕೇವಲಿ ಭಟ್ಟಾರೊಡನೆ ಮೌರ್ಯವಂಶದ ಚಕ್ರವರ್ತಿ ಸಂಪ್ರತಿ ಚಂದ್ರಗುಪ್ತನು ಇಂದಿನ ಶ್ರವಣಬೇಳಗೊಳ(ಕಟವಪ್ರ)ವು ಮೌರ್ಯರ ಸಾಮ್ರಾಜ್ಯಕ್ಕೆ ಸೇರಿದ್ದ ಪ್ರದೇಶವಾಗಿದ್ದುದರಿಂಲೇ ಸಂಪ್ರತಿ ಚಂದ್ರಗುಪ್ತನು ಸೂಕ್ತ ಸೌಲಭ್ಯಗಳು ತಮಗೆ ದೊರಕುತ್ತವೆಂಬ ಭರವಸೆಯಿಂದಲೇ ಶ್ರವಣಬೆಳಗೊಳಕ್ಕೆ ಬಂದಿದ್ದಾನೆಂದು ಅಂತರಿಕ ಹಾಗೂ ಬಾಹ್ಯ ಆಧಾರಗಳಿಂದ ತಿಳಿಯಬಹುದು.

ಕ್ರಿ.ಶ. 10ನೇ ಶತಮಾನದಲ್ಲಿ ಕನ್ನಡದ ಜೈನ ಕವಿಗಳು ತಮ್ಮ ಆಶ್ರಯದಾತರನ್ನು ಪೌರಾಣಿಕ ವ್ಯಕ್ತಿಗಳೊಡನೆ ಸಮೀಕರಿಸಿ ಕಾವ್ಯವನ್ನು ರಚಿಸುವ ಪರಂಪರೆಯನ್ನು ಆರಂಭಿಸಿದರು. ಇಂತಹ ಕಾವ್ಯಗಳನ್ನು ಚಾರಿತ್ರಿಕ ಧ್ವನಿ ಕಾವ್ಯಗಳು ಎಂದು ಕರೆಯಬಹುದು. ಕಾವ್ಯದ ಕಥಾ ನಾಯಕನೊಡನೆ ತನ್ನ ಆಶ್ರಯದಾತನಾದ ಸಮಕಾಲೀನ ರಾಜನೊಬ್ಬನನ್ನು

ಅಭೇದಗೊಳಿಸಿ ಬರೆಯುವ ಪರಂಪರೆ ಒಂದನೆಯ ಗುಣವರ್ಮನಿಂದ ಆರಂಭವಾಯಿತು. ಇಂತಹ ಮಹತ್ವದ ಸಾಹಿತ್ಯ ಪರಂಪರೆಯೊಂದರ ನಿರ್ಮಾಪಕರಾದ ಒಂದನೆಯ ಗುಣವರ್ಮನು ಹರಿವಂಶ ಮತ್ತು ಶೂದ್ರಕ ಎಂಬ ಎರಡು ಕಾವ್ಯಗಳನ್ನು ರಚಿಸಿದ್ದಾನೆ.

ಶೂದ್ರಕ ಕಾವ್ಯವು ಉಪಲಬ್ದವಾಗಿಲ್ಲದಿದ್ದರೂ ಅಭಿನವವಾದಿ ವಿದ್ಯಾನಂದನನ ಕಾವ್ಯಸಾರ, ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ಕೇಶರಾಜನ ಶಬ್ದಮಣಿದರ್ಪಣ ನಾಗವರ್ಮನ ಕಾವ್ಯಲೋಕನ, ಕರ್ನಾಟಕ ಭಾಷಾಭೂಷಣ ಮುಂತಾದ ಕೃತಿಗಳಲ್ಲಿ ಶೂದ್ರಕ ಕಾವ್ಯದ 74 ಪದ್ಯಗಳು ಹಾಗೂ ಗದ್ಯದ ಒಂದು ತುಣುಕು ದೂರೆತಿದೆ. ಅವುಗಳಲ್ಲಿ 31 ಪದ್ಯಗಳಲ್ಲಿ ಐತಿಹಾಸಿಕ ಅಂಶಗಳಿವೆ ಎಂದು ಪ್ರೊ.ರಾ.ಗೌ. ಗುರುತಿಸಿದ್ದಾರೆ.

ಶೂದ್ರಕ ಕಾವ್ಯವು ಸಂಪೂರ್ಣವಾಗಿ ದೊರೆತಿದ್ದರೆ ಗಂಗರ ಹಾಗೂ ಸಮಕಾಲೀನ ಚೋಳರ ಚರಿತ್ರೆಯ ಬಗ್ಗೆ ಅಮೂಲ್ಯವಾದ ಮಾಹಿತಿ ದೊರೆಯುತಿತ್ತೆಂದು ಹೇಳಬಹುದು. ಗುಣವರ್ಮನ ನಂತರ ಪಂಪ, ಪೊನ್ನ, ರನ್ನರ ಕಾವ್ಯಗಳಲ್ಲಿ ಐತಿಹಾಸಿಕ ಅಂಶಗಳು ದೊರೆಯುತ್ತವೆ.

ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಕಾವ್ಯದ ನಾಯಕನಾದ ಅರ್ಜುನನೊಡನೆ ತನ್ನ ಆಶ್ರಯದಾತನಾದ ಇಮ್ಮಡಿ ಅರಿಕೇಸರಿಯನ್ನು ಸಮೀಕರಿಸಿ ಬರೆದುದರಿಂದ ಚಾರಿತ್ರಿಕ ಅಂಶಗಳು ನೇರವಾಗಿ ಹಾಗೂ ಧ್ವನಿಪೂರ್ಣವಾಗಿ ಚಿತ್ರಿತವಾಗಿವೆ. ಈ ಕಾವ್ಯದಲ್ಲಿನ ಅರಿಕೇಸರಿ ಪೂರ್ವಿಕರ ವಂಶಾವಳಿ ಹಾಗೂ ಅರಿಕೇಸರಿಯ ಬಗೆಗಿನ ವಿವರಗಳು ಸಂಪೂರ್ಣವಾಗಿ ಶಾಸನೋಕ್ತ ವಿವರಗಳೊಂದಿಗೆ ಸರಿಹೊಂದುತ್ತವೆ. ಪಂಪನು ಅರಿಕೇಸರಿಯ ಆಶ್ರಯದಲ್ಲಿದುದರಿಂದ ಅರಿಕೇಸರಿಯ ಯುದ್ಧಗಳಲ್ಲಿಯೂ ಪಾಲ್ಗೊಂಡಿರುವ ಸಾಧ್ಯತೆಗಳಿರುವುದರಿಂದ ಅರಿಕೇಸರಿಯ ಸಮರಗಳನ್ನು ಕುರಿತು ಅಧಿಕೃತ ವಿವರಗಳನ್ನು ನೀಡಿದ್ದಾನೆಂದು ವಿದ್ವಾಂಸರು ಗುರುತಿಸಿದ್ದಾರೆ. ಯುದ್ಧಮಲ್ಲನ ಪುತ್ರನಾದ ಒಂದನೇ ಅರಿಕೇಸರಿಯು ರಾಷ್ಟ್ರಕೂಟರ ಅಧೀನದಲ್ಲಿ ಸಾಮಂತನಾಗಿದ್ದರೂ ತನ್ನ ಸ್ವಂತ ಪರಾಕ್ರಮದಿಂದ ಹಲವು ಸಾಧನೆಗಳನ್ನು ಮಾಡಿದ ವಿಚಾರವು ವಿಕ್ರಮಾರ್ಜನ ವಿಜಯದಲ್ಲಿ ಚಿತ್ರಿತವಾಗಿದೆ. ಅರಿಕೇಸರಿಯ ಸಾಧನೆಗೆ ಸಂಬಂಧಿಸಿದ ಮಹತ್ವದ ಸಂಗತಿಯೊಂದು ಈ ಕೆಳಗಿನ ಪದ್ಯದಲ್ಲಿ ನಿರೂಪಿಸಲಾಗಿದೆ.

'ನಿರುಪಮ ದೇವನ ರಾಜ್ಯದೊ ಳರಿಕೇಸರಿ ವೆಂಗಿ ವಿಷಯಮಂ ತ್ರಿಕಳಂಗಂ ಬೆರಸೊತ್ತಿಕೊಂಡು ಗರ್ವದೆ ಬರೆಯಿಸಿದಂ ಹೆಸರನಖಿಳ ದಿಗ್ಭಿತ್ತಿಗಳೊಳ್'

ರಾಷ್ಟ್ರಕೂಟ ಚಕ್ರವರ್ತಿ ನಿರುಪಮ ದೇವನ ಆಳ್ವಿಕೆಯ ಕಾಲದಲ್ಲಿ ವೆಂಗಿ ಮತ್ತು ತ್ರಿಕಳಿಂಗಗಳನ್ನು ಜಯಿಸಿ ಸಮಸ್ತ ದಿಕ್ಕುಗಳಿಗೂ ತನ್ನ ಹೆಸರನ್ನು ಹರಡಿದನೆಂದು ಈ ಪದ್ಯವನ್ನು ಅರ್ಥೈಸಬಹುದು.

2ನೇ ಅರಿಕೇಸರಿಯ ತಂದೆಯಾದ ಇಮ್ಮಡಿ ನರಸಿಂಹನು ಲಾಟ ದೇಶವನ್ನು ಜಯಿಸಿದ ಸಂಗತಿ, ಸಪ್ತಮಾಳವ ಪ್ರದೇಶವನ್ನು ಜಯಿಸಿದ ಸಂಗತಿ, ಗೂರ್ಜರ ಮಹೀಪಾಲನನ್ನು ಪರಾಜಯಗೊಳಿಸಿದ ವಿಚಾರ, ಉತ್ತರ ಭಾರತದಲ್ಲಿ

ಗಂಗಾನದಿಯವರೆಗಿನ ಪ್ರದೇಶವನ್ನು ಜಯಿಸಿ ಗಂಗಾನದಿಯಲ್ಲಿ ತನ್ನ ಕುದುರೆಗಳನ್ನು ಮೀಯಿಸಿ, ಕಾಳ ಪ್ರಿಯದಲ್ಲಿ ವಿಜಯಸ್ತಂಭ ಸ್ಥಾಪಿಸಿದನೆಂದು ವಿಕ್ರಮಾರ್ಜನ ವಿಜಯದಲ್ಲಿ ವರ್ಣಿಸಲಾಗಿದೆ. ಉಜ್ಜಯಿನಿಯ ಕನೌಜಿನ ಹತ್ತಿರದಲ್ಲಿರುವ ಕಲ್ಪಿಯ ಮಹಾಕಾಳ ದೇವಾಲಯದ ಮುಂದೆ ಇಮ್ಮಡಿ ನರಸಿಂಹನ್ನು ವಿಜಯಸ್ತಂಭವನ್ನು ಸ್ಥಾಪಿಸಿದನೆಂದು ವಿದ್ವಾಂಸರು ಗುರುತಿಸಿದ್ದಾರೆ. ಅರಿಕೇಸರಿಯ ವೇಮಲವಾಡ ಶಾಸನ ಹಾಗೂ ಪರಭಣಿ ಶಾಸನಗಳು ವಿಕ್ರಮಾರ್ಜನ ವಿಜಯದಲ್ಲಿ ವರ್ಣಿತವಾಗಿರುವ ವಿಷಯಗಳು ಸಮರ್ಥಿಸುತ್ತವೆ. ಪೊನ್ನನು ಭುವನೈಕ ರಾಮಾಭ್ಯುದಯ ಕಾವ್ಯದಲ್ಲಿ ತನ್ನ ಆಶ್ರಯದಾತನಾದ ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನನ್ನು ಪೌರಾಣಿಕ ವ್ಯಕ್ತಿಯಾದ ಶ್ರೀರಾಮನೊಡನೆ ಸಮೀಕರಿಸಿ ಕಾವ್ಯವನ್ನು ರಚಿಸಿದ್ದಾನೆಂದು ಗುರುತಿಸಿದ್ದಾರೆ. ಮೂರನೇ ಕೃಷ್ಣನು ಚೋಳದೊರೆ ಪರಾಂತಕನ ಮಗನಾದ ರಾಜಾದಿತ್ಯನನ್ನು ತಕ್ಕೋಲ ಯುದ್ಧದಲ್ಲಿ ಕೊಂದ ವಿಷಯವು ಧ್ವನಿ ರೂಪದಲ್ಲಿ ಈ ಚಾರಿತ್ರಿಕ ಧ್ವನಿ ಕಾವ್ಯದಲ್ಲಿ ಚಿತ್ರಿಸಲ್ಪಟ್ಟಿದೆ ಎಂದು ವಿದ್ವಾಂಸರು ಗುರ್ತಿಸಿದ್ದಾರೆ.

'ಭುವನೈಕ ರಾಮಾಭ್ಯುದಯ' ಕಾವ್ಯದಲ್ಲಿ ಮೂರನೇ ಕೃಷ್ಣನನ್ನು ರಾಮಾಯಣದ ಶ್ರೀ ರಾಮಚಂದ್ರನಿಗೆ ಸಮೀಕರಿಸಿ ಚಿತ್ರಿಸಲಾಗಿದೆ ಎಂದು ವಿದ್ವಾಂಸರೆಲ್ಲರೂ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಕಾವ್ಯದಲ್ಲಿ ಮೂರನೇ ಕೃಷ್ಣನನ್ನು ಶ್ರೀರಾಮನಿಗೆ ಸಮೀಕರಿಸಿ ಚಿತ್ರಿಸಲಾಗಿದೆ ಎಂದು ಹೇಳುವುದಕ್ಕಿಂತ ಪರಶುರಾಮನಿಗೆ ಸಮೀಕರಿಸಿ ಈ ಕಾವ್ಯವನ್ನು ರಚಿಸಲಾಗಿದೆ ಎಂದು ಹೇಳಬಹುದು. ಏಕೆಂದರೆ, ಶ್ರೀರಾಮನು ರಾವಣನೊಬ್ಬನನ್ನು ಮಾತ್ರ ಯುದ್ಧದಲ್ಲಿ ಸೋಲಿಸಿ ಕೊಂದಿದ್ದನು. ಮೂರನೇ ಕೃಷ್ಣನು ಸಹ ಭಾರತಾದಾದ್ಯಂತ ಸೈನ್ಯ ಸಮೇತ ದಂಡಯಾತ್ರೆ ಮಾಡಿ ಹಲವಾರು ರಾಜ ಮಹಾರಾಜರನ್ನು ಸೋಲಿಸಿ ಕೊಂದಿದ್ದನು. ಈ ಸಂದರ್ಭದಲ್ಲಿ ಸ್ಮರಿಸಬಹುದು ಕೃಷ್ಣನು ಚೋಳ, ಪಾಂಡ್ಯ, ಚೇರ, ಶ್ರೀಲಂಕಾ ಮುಂತಾದ ರಾಜ್ಯಗಳನ್ನು ಜಯಿಸಿದ್ದನು. ಮಧ್ಯಪ್ರದೇಶದ 'ಜುರಾ'ದಲ್ಲಿ ಕೃಷ್ಣನ ಪ್ರಶಸ್ತಿ ಶಾಸನವಿದೆ. ಕರ್ನಾಟಕದಿಂದ ಮಧ್ಯಪ್ರದೇಶದವರೆಗೂ ಕೃಷ್ಣನು ವಿಜಯವನ್ನು ಸಾಧಿಸಿದ್ದ ಎಂಬುದು ಈ ಶಾಸನದಿಂದ ತಿಳಿಯಬಹುದು. ಇರಿವ ಬೆಡಂಗ ಸತ್ಯಾಶ್ರಯನನ್ನು ಮಹಾಭಾರತದ ಭೀಮನೊಡನೆ ಹೋಲಿಸಿ ರನ್ನನ್ನು ಸಾಹಸಭೀಮ ವಿಜಯಕಾವ್ಯವನ್ನು ರಚಿಸಿದ್ದಾನೆ. ಈ ಕಾವ್ಯದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇರಿವ ಬೆಡಂಗ ಸತ್ಯಾಶ್ರಯನ ವರೆಗಿನ ವಂಶಾವಳಿಯನ್ನು ನೀಡಿದ್ದು ಈ ವಂಶಾವಳಿಯು ಶಾಸನಗಳಲ್ಲಿನ ವಿವರಗಳೊಂದಿಗೆ ಸರಿಹೊಂದುತ್ತದೆ. ಸತ್ಯಾಶ್ರಯನ ತಂದೆಯಾದ ಇಮ್ಮಡಿ ತೈಲಪನನ್ನು ಕೊಂಕಣ ಭಯಂಕರ, ರಾಷ್ಟ್ರಕೂಟ, ಕಾಳಕೂಟ, ಪಾಂಚಾಲ ಮದೇಭ ಪಂಚಾನನ, ಪೂರ್ಜರ ಭಯಜ್ವರ ಸಮಸ್ತ ಮಾಳವ ಶತ್ರುಗ್ರ ಹೋಚ್ಚಾಟ ಮುಂತಾದ ಬಿರುದುಗಳೊಂದಿಗೆ ವರ್ಣಿಸಲಾಗಿದೆ.

ರನ್ನನ ಅಜಿತ ಪುರಾಣದಲ್ಲಿಯೂ ಐತಿಹಾಸಿಕ ಮಹತ್ವದ ಅನೇಕ ಸಂಗತಿಗಳೂ ಚಿತ್ರಿತವಾಗಿವೆ. ಅತ್ತಿಮಬ್ಬೆಯ ಇತಿವೃತ್ತ, ಅತ್ತಿಮಬ್ಬೆಯ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ಸಹ ಚಿತ್ರಿಸಲ್ಪಟ್ಟಿವೆ. ಇವುಗಳನ್ನು ಕುರಿತು ಲಕ್ಕುಂಡಿಯಲ್ಲಿರುವ ಅತ್ತಿಮಬ್ಬೆಯ ಶಾಸನದಲ್ಲಿಯೂ ವಿವರಗಳಿರುವುದನ್ನು ಗಮನಿಸಬಹುದು.

ಗಂಗದೊರೆ ನೊಳಂಬಕುಲಾಂತಕ ರಾಚಮಲ್ಲನ್ನು ಗಂಗಚೂಡಾಮಣಿ, ಜಗದೇಕವೀರ, ಮುಂತಾದ ಬಿರುದುಗಳನ್ನು ಹೊಂದಿದ್ದನು. ಈತನ ಸೇನಾಧಿಪತಿಯಾಗಿದ್ದ ಚಾವುಂಡರಾಯನು ರಚಿಸಿರುವ ಚಾವುಂಡರಾಯ ಪುರಾಣ ಕಾವ್ಯದಲ್ಲಿಯೂ ಐತಿಹಾಸಿಕ ವಿವರಗಳ ಆಗರದಂತಿರುವ ಈ ಕಾವ್ಯದಲ್ಲಿ ಚಾವುಂಡರಾಯನು ಗಂಗರ ಪರವಾಗಿ ಮಾಡಿದ ಯುದ್ಧಗಳ ಬಗ್ಗೆ ಮಾಹಿತಿಯನ್ನು ಗಮನಿಸಬಹುದು.

ಚಾವುಂಡರಾಯನು ಮಾನ್ಯಖೇಟದ ಯುದ್ಧದಲ್ಲಿ ವಜ್ಜಲದೇವನನ್ನು ಗೆದ್ದು 'ಸಮರದುರಂಧಕ' ಎಂಬ ಬಿರುದನ್ನು ಪಡೆದನು. ನೊಳಂಬ ದೊರೆಯನ್ನು ಸೋಲಿಸಿ 'ವೀರಮಾರ್ತಾಂಡ' ವೆಂಬ ಬಿರುದನ್ನು ಧರಿಸಿದನು. ಉಚ್ಚಂಗಿಯ ಕೋಟೆಯನ್ನು ಗೆದ್ದು ರಣರಂಗ ಸಿಂಗ ಎಂಬ ಬಿರುದನ್ನು ಪಡೆದನು. ಬಾಗೆಯೂರ ಕೋಟೆಯನ್ನು ಜಯಿಸಿ ತ್ರಿಭುವನ ವೀರನನ್ನು ಕೊಂದು ವೈರಿಕುಲಕಾಲದಂಡ ಎಂಬ ಬಿರುದನ್ನು ಧರಿಸಿದನು. ತನ್ನ ತಮ್ಮನಾದ ನಾಗವರ್ಮನನ್ನು ಕೊಂದು ಮುದರಾಚಾರ್ಯನನ್ನು ಕೊಂದು 'ಸರ್ಮ 6 ಪರಶರಾಮ' ಎಂಬ ಬಿರುದನ್ನು ಹೊಂದಿದನು. ನೃಪಕಾಮನ ಕೋಟೆಯನ್ನು ಗೆದ್ದುದರಿಂದ 'ಭಾಜವಿಕ್ರಮ' ಎಂಬ ಬಿರುದನ್ನು ಪಡೆದನ್ನು. ಈ ಎಲ್ಲಾ ವಿವರಗಳು ಚಾವುಂಡರಾಯ ಪುರಾಣದಲ್ಲಿ ಚಿತ್ರಿಸಲ್ಪಟ್ಟಿವೆ.

18ನೇ ಶತಮಾನದ ಅಂತ್ಯದಲ್ಲಿ ಕಂಡುಬರುವ ಕವಿ ದೇವ ಚಂದ್ರನ 'ರಾಜಾವಳಿ ಕಥಾಸಾರ' ಎಂಬ ಕೃತಿಯು ಅಮೂಲ್ಯವಾದ ಐತಿಹಾಸಿಕ ಅಂಶಗಳನ್ನು ಹೊಂದಿರುವ ಮಹತ್ವದ ಗ್ರಂಥವಾಗಿದೆ. ಗಂಗರು, ಚೋಳರು, ಹೊಯ್ಸಳರು, ಕಳಚೂರಿಗಳು, ವಿಜಯನಗರದ ಅರಸರು, ಮೈಸೂರಿನ ಒಡೆಯರು, ಹೈದರಾಲಿ, ಟಿಪ್ಪು ಮುಂತಾದ ಅರಸರ ಇತಿಹಾಸವನ್ನು ಕುರಿತ ವಿವರಗಳಿವೆ. ಜೈನಧರ್ಮದ ಬಗ್ಗೆ ಅಭಿಮಾನದ ಅತಿರೇಕದಿಂದ ದೇವಚಂದ್ರನು ರಾಜಾವಳಿ ಕಥಾಸಾರದಲ್ಲಿ ಸುಳಗಳನ್ನೇ ಹೆಚ್ಚಾಗಿ ಬರೆದಿದ್ದಾನೆಂದು ಕೆಲವು ವಿದ್ವಾಂಸರ ಅಭಿಪ್ರಾಯ.

ದೇವಚಂದ್ರನು ರಾಜಾವಳಿ ಕಥೆಯಲ್ಲಿ ಕೊಟ್ಟಿರುವ ಮೂಗೂರಿನ ತಿಬ್ಬಾದೇವಿಯ ದೇವಾಲಯದ ಬಗೆಗಿನ ವಿವರಗಳನ್ನು ಗಮನಿಸಬಹುದು. ಮೂಗೂರಿನಲ್ಲಿ ಒಂದು ಪಾರ್ಶ್ವನಾಥನ ಬಸದಿ ಇತ್ತು. ಪಾರ್ಶ್ವನಾಥನ ವಿಗ್ರಹವನ್ನು ತೆಗೆದುಹಾಕಿ ಅಲ್ಲಿಯ ಪದ್ಮಾವತಿಯ ಯಕ್ಷಿಯ ವಿಗ್ರಹವನ್ನು ಬಿಸಾಡಿದರು. ಕಾಲಾನಂತರದಲ್ಲಿ ತಿಪ್ಪೆಯಲ್ಲಿ ಸಿಕ್ಕ ಯಕ್ಷಿಯ ವಿಗ್ರಹವನ್ನು 'ತಿಪ್ಪಾದೇವಿ' ಎಂದು ಹೆಸರಿಟ್ಟು ಪೂಜಿಸುತ್ತಿದ್ದಾರೆ. ಅದೇ ದೇವಾಲಯದಲ್ಲಿ ಹೊರಭಿತ್ತಿಯಲ್ಲಿ ಒಂದು ಜೈನ ಶಾಸನವಿದೆ. ಅದು ಹಿಂದೊಂದು ಕಾಲದಲ್ಲಿ ಬಸದಿಯಾಗಿದ್ದುದು ಆಂತರಿಕ ಹಾಗೂ ಬಾಹ್ಯ ಆಧಾರಗಳಿಂದ ಖಚಿತವಾಗುತ್ತದೆ. ಆದ್ದರಿಂದ ದೇವಚಂದ್ರನು ಬರೆದಿರುವ ವಿಷಯಗಳಲ್ಲಿ ಸತ್ಯ ಸಂಗತಿಗಳು ಇವೆ ಎಂದು ತಿಳಿದುಬರುತ್ತದೆ.

ಒಟ್ಟಾರೆ, ದೇವಚಂದ್ರನು ಹೇಳಿರುವ ಐತಿಹಾಸಿಕ ಸಂಗತಿಗಳನ್ನು ಎಚ್ಚರಿಕೆಯಿಂದ ಮರುಪರಿಶೀಲಿಸಬೇಕಾದ ಅಗತ್ಯವಿದೆ. ಈ ಗ್ರಂಥವು ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಈ ಎಲ್ಲವುಗಳನ್ನು ಒಳಗೊಂಡ ಸಾಂಸ್ಕೃತಿಕ ಮಹತ್ವದ ಗ್ರಂಥವಾಗಿದೆ ಎಂದು

ಹೇಳಬಹುದು. ಕನ್ನಡ ಜೈನಕಾವ್ಯಗಳು ಕೇವಲ ಧಾರ್ಮಿಕ ಕಾವ್ಯಗಳಲ್ಲಿ, ಇತಿಹಾಸವನ್ನೂ ಒಳಗೊಂಡ ಸಾಂಸ್ಕೃತಿಕ ಪಥ್ಯಗಳಿಂದ ಹೇಳಬಹುದು.

**ಪರಾಮರ್ಶನ ಗ್ರಂಥಗಳು:**


1. ಕೇಶವಭಟ್ಟ ಟಿ. (1960). ಶಿವಕೋಟ್ಯಾಚಾರ ವಡ್ಡಾರಾಧನೆ (ಗದ್ಯಾನುವವಾದ). ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ಪದ್ಮಪ್ರಸಾದ್ ಎಸ್. ಪಿ. (2021). ಕನ್ನಡ ಜೈನ ಸಾಹಿತ್ಯ ಚರಿತ್ರೆ: ಸಂಪುಟ-1 (ಸಂ). ಎಸ್. ಪಿ. ಪದ್ಮಪ್ರಸಾದ್. ಬೆಂಗಳೂರು.
3. ಶಿವಾನಂದ ಎಸ್. (2008). ಕನ್ನಡ ಜೈನ ಪುರಾಣಗಳು: ಒಂದು ಸಮಗ್ರ ಅಧ್ಯಯನ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.